ವೈದ್ಯರುಗಳು ಮುಷ್ಕರ ಮಾಡುತ್ತಿರುವುದು.

ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) : ಕಳೆದ ಒಂದೂವರೆ ತಿಂಗಳಿನಿಂದ ವೈದ್ಯರುಗಳು ಮುಷ್ಕರ ಮಾಡುತ್ತಿದ್ದಾರೆ. Results of the entire medical examinations have been help us.

ಎಕ್ಸಾಮಿನೇಷನ್ ಫೈನಲ್ ಆದರೂ ಕೂಡ ರಿಸಲ್ಟ್ ಆಗಿಲ್ಲ. ಕ್ಲಿನಿಕಲ್ ಎಕ್ಸಾಮಿನೇಷನ್, ಪೋಸ್ಟ್ ಗ್ರಾಜ್ಯುಯೇಟ್ ಎಕ್ಸಾಮಿನೇಷನ್ ಮಾಡುತ್ತಿಲ್ಲ. ಥಿಯರೀ ಎಕ್ಸಾಮಿನೇಷನ್ ಮುಗಿದರೂ ಕೂಡ ಮಾಡುತ್ತಿಲ್ಲ. ನಮಗೆ ಒಂದು ಸಂಶಯ ಇದೆ, ಆದಗು ಏನೆಂದರೆ

The students will miss a term if the strike continues further. ಆಲ್ ಇಂಡಿಯಾ ಎಂಟ್ರೆನ್ಸ್ ಎಕ್ಸಾಮಿನೇಷನ್ ಒಂದು ವಾದದೊಳಗೆ ಆಗಬೇಕಾಗುತ್ತದೆ. The final year students have missed this all-India Entrance examination due to this delay. So the strike should be stopped immediately and the results should be announced early. ಇದರಿಂದ ಪೋಸ್ಟಿಂಗ್ಸ್ ಕೂಡ ತೊಂದರೆಯಾಗುತ್ತದೆ, ಫೈನಲ್ ಇಯರ್ ಸ್ಟೂಡೆಂಟ್ಸ್‌ಗೆ ತೊಂದರೆಯಾಗುತ್ತದೆ. ಯಾರಿಗೆ ಎಂಟ್ರೆನ್ಸ್ ಎಕ್ಸಾಮಿನೇಷನ್ ಆಗಬೇಕೋ ಅವರಿಗೆ ಈ ಎಂಟ್ರೆನ್ಸ್ ಎಕ್ಸಾಮಿನೇಷನ್ ಮಾಡುವುದಕ್ಕೆ ತೊಂದರೆಯಾಗಿದೆ. ಅದಕ್ಕೆ ಆಲ್‌ಟರ್‌ನೇಟೀವ್ ಅರೇಜ್‌ಮೆಂಟ್ಸ್ ಮಾಡುವ ಬಗ್ಗೆ ಸರಕಾರ ಏನಾದರೂ ಯೋಚನೆ ಮಾಡಿದೆಯೇ? Alternative arrangements may be made to start theory and practical examinations. ಇದು ಬಹಳ ಮುಖ್ಯವಾದ ಪ್ರಶ್ನೆ. ಒಂದು ವಾರದಲ್ಲಿ ಇದು ಆಗದಿದ್ದರೆ ಅವರಿಗೆ ಬಹಳ ತೊಂದರೆಯಾಗುತ್ತದೆ. Otherwise, they will miss the whole term.

ಇದರ ಬಗ್ಗೆ ಸರಕಾರ ಆಲೋಚನೆ ಮಾಡಬೇಕಲ್ಲವೇ? ಇಲ್ಲವಾದರೆ ಅವರ ಪಾಡಿಗೆ ಅವರು ಸ್ಟ್ರೈಕ್ ಮಾಡುತ್ತಾರೆ. ನಿಮ್ಮ ಪಾಡಿಗೆ ನೀವು ಕುಳಿತಿರುತ್ತೀರಿ. ಇದರಿಂದ ತೊಂದರೆಯಾಗತಕ್ಕಂಥಾದ್ದು ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ಆ ವಿಚಾರ ಸರ್ಕಾರದ ಮುಂದಿದೆ. ಡಾಕ್ಟರುಗಳ ಅಸೋಸಿಯೇಷನ್ ಏನಿದೆ ಅವರ ಜೊತೆಯಲ್ಲಿ ಮಾತುಕತೆಯನ್ನು ಮಾನ್ಯ ಶಿಕ್ಷಣ ಸಚಿವರು ಮತ್ತು ಆರೋಗ್ಯ ಸಚಿವರು ಮಾತನಾಡಿದ್ದಾರೆ. ಬಹಳ ವಿವರವಾಗಿ ಎರಡು-ಮೂರು ಸಾರಿ ಮಾತುಕತೆಗಳು ನಡೆದಿವೆ. ಏನು ಪ್ರಶ್ನೆಯಿದೆ ಅಂದರೆ ಬೇರೆ ಬೇರೆ ಇಲಾಖೆಗಳ ಪ್ರಶ್ನೆ ಅಡ್ಡ ಬರುತ್ತಿದೆ. ಅತಿ ಮುಖ್ಯವಾಗಿರತಕ್ಕ ವಿಚಾರ. ಅವರು ಹೇಳತಕ್ಕದ್ದು ಯು.ಜಿ.ಸಿ ಸ್ಕೇಲನ್ನು ಬೇರೆಯವರಿಗೆ ಕೊಟ್ಟಿದ್ದೀರಿ, ನಮಗೆ ಕೊಟ್ಟಿಲ್ಲವೆಂದು ಯು.ಜಿ.ಸಿ.ಗೆ ಸ್ಕೇಲ್ ಟೈಮ್ ಮುಕ್ತಾಯವಾಗಿದೆ. 1990ಕ್ಕೆ ಅದು ಮುಕ್ತಾಯವಾಗಿದೆ. ನನಗೆ ಗೊತ್ತಿರುವ ಹಾಗೆ ನಾವು ಇದನ್ನು ಈಗ ಮಾಡುವುದಕ್ಕೆ ಹೋದರೆ ನಾವು ಕೈಯಿಂದ ಕೂಡಬೇಕಾಗುತ್ತದೆ. ಹಾಗೆ ಕೊಡುವುದಕ್ಕೆ ಎಕ್ಸ್‌ಚೆಕ್ಕರ್ ಶಕ್ತಿಯನ್ನು ನೋಡಿಕೊಳ್ಳಬೇಕು. ಒಬ್ಬರಿಗೆ ಕೊಟ್ಟರೆ ಎಲ್ಲವೂ ಶುರುವಾಗುತ್ತವೆ ಎನ್ನುವ ಅಭಿಪ್ರಾಯವನ್ನು ಇಟ್ಟು ನಾವು ವಿಚಾರ ಮಾಡಬೇಕಾಗುತ್ತದೆ. ಆದರೂ ಕೂಡ ಅದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಸದ್ಯಕ್ಕೆ ಇಷ್ಟೇ ಸಾಕು ಎಂದು ನನಗನಿಸುತ್ತದೆ. ಆಮೇಲೆ ನೋಡೋಣ. ಇನ್ನು ಸ್ವಲ್ಪ ಮಾತುಕತೆ ಮಾಡಿ ಅದನ್ನು ಮುಕ್ತಾಯ ಮಾಡಬೇಕು. ಮಕ್ಕಳಿಗೆ ತೊಂದರೆಯಾಗತಕ್ಕ ವಿಚಾರ ನಮಗೆ ಗೊತ್ತಿದೆ ಅದನ್ನು ನಾನು ಒಪ್ಪುತ್ತೇನೆ. ಅದನ್ನು ತಪ್ಪಿಸಬೇಕೆನ್ನುವ ಸದುದ್ದೇಶದಿಂದ ಮಾತಕತೆಯನ್ನು ನಾವು ಮಾಡುತ್ತೇವೆ.

MR. SPEAKER: Now Hon'ble Minister for Transport to make a statement.